## ರಮ್ಯಾರ ಇಂಗ್ಲಿಷ್ ಚೈತ್ರ

ಝೀ ಕನ್ನಡದ 'ವೀಕೆಂಡ್ ವಿತ್ ರಮೇಶ್' ಜನಪ್ರಿಯ ಕಾರ್ಯಕ್ರಮ ಎನ್ನುವುದರಲ್ಲಿ ಎರಡು ಮಾತಿಲ್ಲ. ಐದನೇ ಸರಣಿಯ ಮೊದಲ ಕಂತಿನಲ್ಲಿ ನಟಿ–ರಾಜಕಾರಣಿ ರಮ್ಯಾ ಅವರ ಸಂದರ್ಶನ ಪ್ರಸಾರ ಆಯಿತು. ಕಾರ್ಯಕ್ರಮದ ಶೀರ್ಷಿಕೆ ಇಂಗ್ಲಿಷ್‌ನಲ್ಲಿರುವುದಕ್ಕೋ ಏನೋ ಅವರು ಮುಕ್ಕಾಲು ಭಾಗ ಇಂಗ್ಲಿಷ್‌ನಲ್ಲೇ ಮಾತನಾಡಿದರು. ನಿರೂಪಕ, ನಟ ರಮೇಶ್ ಅರವಿಂದ್ ಸಹ ಅವರ ತಾಳಕ್ಕೆ ತಕ್ಕಂತೆ ಇಂಗ್ಲಿಷ್‌ನಲ್ಲೇ ಹೆಚ್ಚು ನಿರೂಪಿಸಿದರು! ಕನ್ನಡ ಗೊತ್ತಿದ್ದವರ ಹತ್ತಿರ ಇಂಗ್ಲಿಷ್ ಮಾತಾಡಿದ್ದರ ಔಚಿತ್ಯ ಏನು ಎಂದು ಅರ್ಥ ಆಗಲಿಲ್ಲ.



ಮಂಡ್ಯದ ಲೋಕಸಭಾ ಸದಸ್ಯರಾಗಿ ಕರ್ನಾಟಕವನ್ನು ಪ್ರತಿನಿಧಿಸಿದ ಅವರು ಕನ್ನಡ ಕಾರ್ಯಕ್ರಮದಲ್ಲಿ ಇಂಗ್ಲಿಷ್ ಮಾತಾಡಿದ್ದು ಬೇಸರ ತಂದಿತು. ಅಂದಹಾಗೆ, ಸಾಧಕರು ಎಂದರೆ ಚಿತ್ರ ರಂಗದ ತಾರೆಯರಿಗೆ ಮಾತ್ರ ಏಕೆ ಪ್ರಾಶಸ್ತ್ಯ ನೀಡಬೇಕು? ಸಾಹಿತ್ಯ, ರಂಗಭೂಮಿ, ಕ್ರೀಡೆ, ಕಲೆ, ಆಡಳಿತ, ಶಿಕ್ಷಣ, ಕೃಷಿ, ಉದ್ಯಮ ಹೀಗೆ ಬೇರೆ ಬೇರೆ ಕ್ಷೇತ್ರದ ಜನರನ್ನೂ ಗುರುತಿಸಿ ಪರಿಚಯಿಸುವುದು ಒಳ್ಳೆಯದು.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ;
ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ;
ಪೂರ್ಣಿಮಾ ಮೂರ್ತಿ, ವಿ. ವಿಜಯೇಂದ್ರ ರಾವ್, ಬೆಂಗಳೂರು

## ರಾಮಾಚಾರಿ ಬೇಜಾರಾಚಾರಿ

ಇಷ್ಟು ದಿನ ಯದ್ವಾ ತದ್ವಾ ಓಡುತ್ತಿದ್ದ ಕಲರ್ಸ್‌ನ 'ರಾಮಾಚಾರಿ' ಈಗ ಸಂಪೂರ್ಣ ಮಕಾಡೆ ಬೀಳುವಂತಿದೆ. ಇಬ್ಬರೂ ಕೆಲಸ ಮಾಡುತ್ತಿರುವ ಸಾಫ್ಟ್‌ವೇರ್ ಕಂಪನಿಯಂತೂ ಮನರಂಜನೆಯ ಕೇಂದ್ರವಾಗಿದೆ. ಬಾಸ್ ಜೋಕರ್ ಥರ ವರ್ತಿಸುತ್ತಿದ್ದು, ಮಹಿಳಾ ಉದ್ಯೋಗಿಗಳ ಹೆಗಲ ಮೇಲೆ ಕೈ ಹಾಕುತ್ತಾರೆ.

'ನಾನು ನೆಕ್ಸ್ಟ್ ತೆಗೆದುಕೊಳ್ಳುವ ನಾಯಿಗೆ ನಿಮ್ಮ ಹೆಸರನ್ನೇ ಇಡುತ್ತೇನೆ ಸರ್' ಎಂದು ಬಾಸ್‌ಗೆ ಚಾರು ಹೇಳುವ ಮಾತು ನಿಜಕ್ಕೂ ಅವರಿಗೆ ಮಾಡುವ ಅವಮಾನ. ಇದೆಲ್ಲ ಮನರಂಜನೆಯಂತೆ ಇರಬೇಕೇ ಹೊರತು ಒಂದು ವರ್ಗವನ್ನು ಅವಮಾನಿಸುವಂತಿರಬಾರದು. ಸಹೋದ್ಯೋಗಿಗಳನ್ನು ಹೊರಗೆ ಕಳುಹಿಸಿ, ರಾಮಾಚಾರಿ ಚಾರುಗೆ ತಾಳಿ ಕಟ್ಟುವುದು ಅವಾಸ್ತವ.

—ಮನೋಜ್ ಕುಮಾರ್ ಕೆ.

ವಾರದ ಪತ್ರ

## ತಪ್ಪು ಕನ್ನಡದ ಪ್ರದರ್ಶನ

ಝೀ ಕನ್ನಡದ 'ಗಟ್ಟಿ ಮೇಳ'ವನ್ನು ಅನವಶ್ಯಕವಾಗಿ ಎಳೆಯುತ್ತಿದ್ದಾರೆ. ಹಿರಿಮಗ ವೇದಾಂತ್ ಮತ್ತು ಅಮೂಲ್ಯ ದಂಪತಿಗೆ ಮಗುವಾಗಿಲ್ಲ ಆದರೆ ಅದು ಅವರ ತಪ್ಪು ಎಂಬಂತೆ ಮನೆ ಮಂದಿ ಪ್ರತಿರೋಧಿಸುವುದು ಸರಿಯಲ್ಲ. ಈ ಸಂಬಂಧ ಮನೆಯಲ್ಲಿ ಪ್ರತಿಯೊಬ್ಬರೂ ವಿರೋಧ ಫಲಕ ಪ್ರದರ್ಶಿಸುವುದು ತೀರ ನಾಟಕೀಯ ಅನಿಸಿತು. ಆ ಮೂಲಕ ತಂಡದ ತಪ್ಪು ಕನ್ನಡದ ಪ್ರದರ್ಶನವೂ ಆದಂತೆ ಆಯಿತು. ವೈದೇಹಿ ಅವರ ಕೈಯಲ್ಲಿದ್ದ ಫಲಕದಲ್ಲಿ ಮಗುವಿಗಾಗಿ ಬದಲು 'ಮಗುಗಾಗಿ' ಎಂದಿತ್ತು. ವೇದಾಂತ ಅವರ ಪಿ.ಎ. ಹಿಡಿದಿದ್ದ ಬೋರ್ಡ್‌ನಲ್ಲಿ ಬಡಾ ಬಾಸ್ 'ಬಡಬಾಸ್' ಆಗಿತ್ತು. ವಿಕ್ರಾಂತ್ ಫಲಕದಲ್ಲಿ ಬೇಕೇ ಬೇಕು ಬದಲು 'ಬೇಕೆ ಬೇಕು', ಆದ್ಯಳ ಫಲಕದಲ್ಲಿ ಏತಕ್ಕಾಗಿ ಎಂಬುದು 'ಯಾತಕ್ಕಾಗಿ' ಎಂದಾಗಿತ್ತು. ಹೀಗೆಯೇ ಆದರೆ ಭವಿಷ್ಯದಲ್ಲಿ ಶುದ್ಧ ಕನ್ನಡವನ್ನು ಹುಡುಕಬೇಕಾದೀತು!

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ಮಕ್ಕಳ ಮೇಲಿನ ದೌರ್ಜನ್ಯ ನಿಲ್ಲಲಿ

ಸ್ಟಾರ್ ಸುವರ್ಣದ 'ನಮ್ಮ ಲಚ್ಚಿ'ಯಲ್ಲಿ ಲಚ್ಚಿ ಎಂಬ ಸಣ್ಣ ಹುಡುಗಿಯದು ಪಾಪದ ಪಾತ್ರ! ಮಕ್ಕಳ ಮೇಲಿನ ದೌರ್ಜನ್ಯವನ್ನು ಅತಿಯಾಗಿ ಚಿತ್ರಿಸುವುದು ಸರಿಯಲ್ಲ. ಸೋದರ ಅತ್ತೆಯ ಪಾತ್ರವನ್ನು ಭೀಕರವಾಗಿ ನಿರೂಪಿಸಿದ್ದಾರೆ. ಖಳನಾಯಕಿಯರಿಗೇ ಸಡ್ಡುಹೊಡೆಯುವಂತಿರುವ ಆ ಪಾತ್ರ ಅಸಹ್ಯ ತರಿಸುತ್ತದೆ. ಲಚ್ಚಿಯನ್ನು ನೆಲಕ್ಕೆ ಹಾಕಿ ಒದೆಯುವುದು, ಕೂದಲು ಹಿಡಿದು ಅಟ್ಟಾಡಿಸಿ ಹೊಡೆಯುವುದು, ಬೆಂಕಿಗೆ ತಳ್ಳುವ ಬೆದರಿಕೆ ಹಾಕುವುದು, ಭಯಂಕರ ಬೈಗುಳ ಸ್ತ್ರೀ ಕುಲಕ್ಕೇ ಮಾಡಿದ ಅವಮಾನ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ತಾಳ್ಮೆ ಪರೀಕ್ಷೆಯ ಕೊನೆಯಲ್ಲಿ ಅತಿ ವೇಗ!

ಬಹುತೇಕ ಧಾರಾವಾಹಿಗಳು ಮುಂಬೈ ಲೋಕಲ್ ಟ್ರೈನ್‌ನಂತೆ ನಿಧಾನವಾಗಿ ಸಾಗುತ್ತಾ ವೀಕ್ಷಕರ ತಾಳ್ಮೆಯನ್ನು ಪರೀಕ್ಷಿಸುತ್ತಿವೆ. ಅಂತ್ಯ ಸಮೀಪಿಸುತ್ತಿದ್ದಂತೆ ಬುಲೆಟ್ ಟ್ರೈನ್ ವೇಗ ಪಡೆದುಕೊಂಡು ದಿಢೀರ್ ಎಂದು ಮಂಗಳ ಹಾಡುತ್ತವೆ. 'ಅಗ್ನಿಸಾಕ್ಷಿ', 'ಮಂಗಳಗೌರಿ ಮದುವೆ' ಮತ್ತು 'ಕನ್ನಡತಿ' ಹೀಗೆ ನೀರಸವಾಗಿ ಕೊನೆಗೊಂಡ ಕೆಲವು ಧಾರಾವಾಹಿಗಳು.

—ರಮಾನಂದ ಶರ್ಮಾ, ಬೆಂಗಳೂರು

## ಮೂಲ ಹಾಡುಗಾರರ ಹೆಸರು ಇರಲಿ

ಚಂದನದ 'ಮರೆಯದ ಮಾಣಿಕ್ಯ' ಸಂಬಂಧಗಳ ಸಂಗೀತಗಾಥೆ ಚೆನ್ನಾಗಿ ಮೂಡಿಬರುತ್ತಿದೆ. ಈಚೆಗೆ ಅನನ್ಯ ಪ್ರಕಾಶ್ ಹಾಗೂ ವಿಶಾಖ ನಾಗಲಾಪುರ ಅವರ ಸಂಗೀತ ಸುಧೆ ಎರಡು ಕಂತುಗಳಲ್ಲಿ ಪ್ರಸಾರ ಆಯಿತು. ಮನಸಿಗೆ ಮುದ ನೀಡಿದ ಕಾರ್ಯಕ್ರಮ ಅದಾಗಿತ್ತು. ಯುವ ಗಾಯಕರನ್ನು ಈ ವೇದಿಕೆಯಲ್ಲಿ ಪರಿಚಯ ಮಾಡುತ್ತಿರುವುದು ಸಂತಸವಾಗುತ್ತದೆ.

ಸಿನಿಮಾದ ಹೆಸರು, ಸಾಹಿತ್ಯ ರಚನೆ, ಸಂಗೀತ ನಿರ್ದೇಶಕರು ಯಾರು ಎಂಬ ವಿವರಣೆಯನ್ನು ನೀಡುತ್ತಿದ್ದಾರೆ. ಆದರೆ, ಗಾಯಕರು ಎಂಬ ತಲೆಬರಹದ ಅಡಿ ಮೂಲ ಗಾಯಕರ ಹೆಸರಿನ ಬದಲು ಪ್ರಸ್ತುತಪಡಿಸುವವರ ಹೆಸರನ್ನು ತೋರಿಸುವುದು ಸರಿ ಕಾಣದು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಯೂಟ್ಯೂಬ್‌ನಲ್ಲಿ 'ಮಿಂಚು'

ಯೂಟ್ಯೂಬ್ ಭೂಮಿಕಾ ಟಾಕೀಸ್‌ನಲ್ಲಿ ಟಿ.ಎನ್. ಸೀತಾರಾಂ ಅವರ 'ಮಿಂಚು' ಮರುಪ್ರಸಾರವಾಗುತ್ತಿದೆ. ಇದರಲ್ಲಿ ದಾಸ್ ಅಂಡ್ ದಾಸ್ ಕಂಪನಿ ಮಾಲೀಕ ಶಂಕರ್ ದಾಸ್ ಅವರ ಪಾತ್ರದಲ್ಲಿ ಜಿ.ಕೆ. ಗೋವಿಂದ ರಾವ್ ಅವರ ಗಂಭೀರ ನಟನೆ, ಜಗದೀಶ್ ದಾಸ್ ಪಾತ್ರದಲ್ಲಿ ರವಿ ಮಂಡ್ಯ ಅವರ ಮನೋಜ್ಞ ಅಭಿನಯ ನೋಡುತ್ತಿದ್ದರೆ ಇಷ್ಟು ಬೇಗ ಮರೆಯಾದರು ಎಂಬ ದುಃಖದ ಭಾವ ಮೂಡುತ್ತದೆ. ಕಾಡುವಂತಹ ಅವರ ನಟನೆ ಹಾಗೂ ರಾಜೀವ್ ಶರ್ಮಾ ತಂತ್ರಗಳು ಗಮನ ಸೆಳೆಯುತ್ತವೆ. ಸರಯೂ ಸಾರಂಗ ಪಾಣಿ ಪಾತ್ರ ಮಧ್ಯಮ ವರ್ಗವನ್ನು ಪ್ರತಿನಿಧಿಸುತ್ತದೆ.

—ಶಶಾಂಕ್ ಎಸ್., ಕೋಣಂದೂರು